ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ
ಸ್ಪೇಷಲ್ ಸಿ.ಸಿ. (ಪೋಕ್ಸೋ) ಸಂಖ್ಯೆ: 104/2017

**ಫ್ರಾಸಾ–03**
**ಚಾಸಾ– 09**

ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ ದಿನಾಂಕ: **11.07.2019**

| | | |
|---|---|---|
| ಸಾಕ್ಷಿದಾರನ ಹೆಸರು | : | ವೈಜಿನಾಥ |
| ತಂದೆಯಹೆಸರು | : | ಜೆಟಿಂಗರಾವ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ನಿಟ್ಟೂರ (ಬಿ) |

ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರವರಿಂಧ:

1. ಈ ಕೇಸಿನ ಪಿರ್ಯಾಧಿ ನನಗೆ ದಾಯಾದಿ ಸಂಬಂಧಿಕನಾಗಬೇಕು. ನನ್ನ ಮನೆ ಮತ್ತು ಅವರ ಮನೆ ಹತ್ತಿಕೊಂಡಂತೆ ಇರುತ್ತದೆ. ಫ್ರಾಸಾ 2 ನನ್ನ ಅಣ್ಣ , ಚಾಸಾ 11 ಶಿವಾನಂದ ಗೊತ್ತು. ಚಾಸಾ 10, 12 ರವರು ನನ್ನ ದಾಯಾದಿ ಸಂಬಂಧಿಕರು. ಫ್ರಾಸಾ 1 ರವರು ಪಿರ್ಯಾಧಿಯ ಮಗಳು, ಆಕೆಯ ವಯಸ್ಸು 17 ವರ್ಷ ಆಗಿತ್ತು. ಆಕೆಯ ತಾಯಿ ತೀರಿಕೊಂಡಿದ್ದಾಳೆ. ಆಕೆಯು ಮನೆಯಲ್ಲಿ ತನ್ನ ತಂದೆ ಜೊತೆಯಲ್ಲಿ ಇರುತ್ತಿದ್ದಾಳೆ. ಆಕೆ 10 ನೇ ತರಗತಿ ಅನುತ್ತಿರ್ಣಗೊಂಡಿದ್ದರಿಂದ , ಆಕೆಯು ಮನೆಯಲ್ಲಿ ಇದ್ದು ಮನೆ ಕೆಲಸ ಮಾಡಿಕೊಂಡು ಇದ್ದಾಳೆ.
2. ಆಕೆ ತಂದೆ ಕೆಲಸಕ್ಕೆ ಹೊರಗೆ ಹೋದಾಗ ಆಕೆ ಒಬ್ಬಳೆ ಮನೆಯಲ್ಲಿ ಇರುತ್ತಿದ್ದಳು. ಆರೋಪಿತರು ನಮ್ಮ ಊರಿನವರು ಇದ್ದು ಪರಿಚಯ ಇದ್ದಾರೆ. 1 ನೇ ಆರೋಪಿ ಫ್ರಾಸಾ 1 ರವರ ಜೊತೆ ಮಾತನಾಡುವುದು, ಚುಡಾಯಿಸುವುದು, ಲೈಂಗಿಕ ಕಿರುಕುಳ ಕೊಡುವುದು, ಇತ್ಯಾಧಿ ನಾನು ನೋಡಿಲ್ಲ. ನಾವು ಈ ವಿಚಾರದ ಬಗ್ಗೆ ಆರೋಪಿತರಿಗೆ ಬುದ್ದಿವಾದ ಹೇಳಿಲ್ಲ.

3. ದಿ. 31.07.2017 ರಂದು ರಾತ್ರಿ 11.00 ಗಂಟೆಗೆ ಪ್ರಾಸಾ 1 ಎಲ್ಲಿ ನಿಂತಿದ್ದಳು , ಆಕೆಯನ್ನು ಯಾರು ಅಪಹರಿಸಿಕೊಂಡು ಹೋಗಿದ್ದರು ಎಂದು ನಾನು ನೋಡಿಲ್ಲ, ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಅವಳ ತಂದೆಗೆ ತಿಳಿಸಿಲ್ಲ. ನಾನು ಮತ್ತು ಚಾಸಾ 9, ಚಾಸಾ 1 , ಎಲ್ಲರೂ ಸೇರಿ 1ನೆ ಆರೋಪಿಯು ಪ್ರಾಸಾ 1 ರವರನ್ನು ಕರೆದುಕೊಂಡು ಹೋಗುವುದನ್ನು ನೊಡಿಲ್ಲ ಮತ್ತು ಶಿವಾಜಿ ಚೌಕ ಬಳಿ ಒಂದು ಜೀಪಿನಲ್ಲಿ ಅವರಿಬ್ಬರು ಹೋಗುವುದನ್ನು ನಾವು ನೋಡಿಲ್ಲ. ಚಾಸಾ 11 ಸ್ಥಳದಲ್ಲಿ ಇದ್ದು 2 ರಿಂದ 6ನೆ ಆರೋಪಿ ಚಿತಾವಣೆ ಮೇರೆಗೆ 1ನೆ ಆರೋಪಿಯು ಪ್ರಾಸಾ 1 ರವರಿಗೆ ಮದುವೆ ಆಗುವ ಉದ್ದೇಶಕ್ಕಾಗಿ ಜೀಪಿನಲ್ಲಿ ಅಪಹರಣ ಮಾಡಿಕೊಂಡು ಹೋದ ನೋಡಿದ ಬಗ್ಗೆ ನಮಗೆ ಹೇಳಿಲ್ಲ.
4. 3 ದಿವಸಗಳ ನಂತರ 1ನೆ ಆರೋಪಿ ಮತ್ತು ಪ್ರಾಸಾ 1 ರವರನ್ನು ಪೋಲಿಸರು ಪತ್ತೆ ಮಾಡಿ ಶಿರಡಿ ದೇವಸ್ಥಾನದ ಬಳಿ ಲಾಡ್ಜನ ಬಳಿ ಸಿಕ್ಕ ಬಗ್ಗೆ ನಮಗೆ ಮಾಹಿತಿ ನೀಡಿಲ್ಲ ಮತ್ತು ಆಕೆಯನ್ನು ಮಾತನಾಡಿಸಲು ಹೋಗಿಲ್ಲ. ನಾನು ಪೋಲಿಸರಿಗೆ ಪ್ರಾಸಾ 1 ರವರು ಅಪಹರಿಸಿಕೊಂಡ ಹೋದ ಸ್ಥಳ ತೊರಿಸಿಲ್ಲ ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಹೆಚ್ಚುವರಿ ಸ.ಅ.ರವರಿಗೆ ಪಾಟೀ ಸವಾಲಿಗೆ ಒಳಪಡಿಸಲಾಯಿತು.)

ಪಾಟೀ ಸವಾಲು: ಸ.ಅ. ರವರಿಂದ.

ಬಾದಿತ ಬಾಲಕಿ ಪ್ರಾಸಾ 1 ರವರನ್ನು ಮನೆಯಲ್ಲಿ ಒಬ್ಬಳೆ ಇರುವುದನ್ನು ನೋಡಿ 1ನೆ ಅರೋಪಿ ಆಗಾಗ ಹೋಗಿ ಮಾತನಾಡಿಸುತ್ತಿದ್ದನು , ಲೈಂಗಿಕ ಕಿರುಕುಳ ನೀಡುತ್ತಿದ್ದನು, ಮದುವೆ ಆಗಲು ಪ್ರಸ್ತಾಪ ಮಾಡಿದನು ಮತ್ತು ಅಂತರ ಜಾತಿ ವಿವಾಹ ಆಗಿದ್ದರಿಂದ ಅದಕ್ಕೆ ನಾವು ಸಮ್ಮತಿಸಲಿಲ್ಲ ಮತ್ತು ಈ ಬಗ್ಗೆ ನಾವು ಎಲ್ಲರೂ ಸೇರಿಕೊಂಡು ಸೂಕ್ತವಾಗಿ ಎಚ್ಚರಿಸಿದ್ದೆವು ಎಂದರೆ ಸರಿಯಲ್ಲ.

ದಿ. 31.07.2017 ರಂದು ರಾತ್ರಿ 11.00 ಗಂಟೆಗೆ 1ನೆ ಅರೋಪಿ ರವರು ಪ್ರಾಸಾ1 ರವರಿಗೆ ತಿಳಿಸಿದ ಮೇರೆಗೆ ಕಾಶಿನಾಥ ರವರ ಮನೆಯ ಎದುರುಗಡೆ ಪ್ರಾಸಾ 1

ಇವಳು ನಿಂತಿದ್ದಳು ಅಲ್ಲಿ 1, 2 ನೆ ಆರೋಪಿತರು ಬಂದು ಆಕೆಯನ್ನು ಶಿವಾಜಿ ಕ್ರಾಸ ಬಳಿ ಕರೆದುಕೊಂಡು ಹೋದರು, ನಾನು ಮತ್ತು ನನ್ನ ತಮ್ಮ ವೈಜಿನಾಥ ಚಾಸಾ 9 ಇಬ್ಬರು ನೋಡಿ ಅದನ್ನು ಪಿರ್ಯಾಧಿ ಬಾಲಾಜಿಗೆ ತಿಳಿಸಿದ್ದೆವು ಎಂದರೆ ಸರಿಯಲ್ಲ. ಆ ನಂತರ ನಾನು, ಪಿರ್ಯಾಧಿ ಚಾಸಾ 1, ಪ್ರಾಸಾ 2 ರವರು 1 ನೇ ಆರೋಪಿ ಮತ್ತು ಪ್ರಾಸಾ 1 ಇವಳಿಗೆ ಹುಡಿಕಲು ಶಿವಾಜಿ ಕ್ರಾಸ ಬಳಿ ಹೋದೆವು, ಆ ಕ್ರಾಸ ಬಳಿ ಜೀಪು ನಂ ಕೆಎ-38 ಎಂ-458 ರಲ್ಲಿ ವಾಹನ ನಿಂತಿತ್ತು ಮತ್ತು ನಾವು ಬರುವುದನ್ನು ನೋಡಿ ಅದು ಹೆಡಗಾಪೂರ ಕಡೆಗೆ ಹೋಗಿತ್ತು ಮತ್ತು ಸ್ಥಳದಲ್ಲಿ ಇದ್ದ ಶಿವಾನಂದ ಚಾಸಾ 11 ರವರಿಗೆ ವಿಚಾರಿಸಲಾಗಿ ಅದರಲ್ಲಿ 1 ರಿಂದ 6 ನೆ ಆರೋಪಿತರು ಪ್ರಾಸಾ 1 ರವರನ್ನು 1 ನೆ ಆರೋಪಿ ಜೊತೆ ಮದುವೆ ಮಾಡುವ ಉದ್ದೇಶದಿಂದ ಕೂಡಿಸಿಕೊಂಡು ಅದರಲ್ಲಿ ಹೋಗಿದ್ದರು ಎಂದು ಮತ್ತು ಜೀಪು ಹೇಡಗಾಪೂರ ಕಡೆಗೆ ಹೋಗಿತ್ತು ಎಂದು ತಿಳಿಸಿದರು ಎಂದರೆ ಸರಿಯಲ್ಲ.

ಇದು ಆದ ನಂತರ ದಿ. 03.08.2017 ರಂದು ಪೋಲಿಸರು ಬಾದಿತ ಬಾಲಕಿ ಪ್ರಾಸಾ 1 ಮತ್ತು 1 ನೆ ಆರೋಪಿಯನ್ನು ಶಿರಡಿಯಲ್ಲಿನ ಒಂದು ಲಾಡ್ಜನಲ್ಲಿ ಪತ್ತೆ ಮಾಡಿ ಅವರನ್ನು ಠಾಣೆಗೆ ವಾಪಸ್ಸು ಕರೆದು ತಂದಿದ್ದಾರೆ ಎಂದು ಗೊತ್ತಾಗಿ ನಾವು ಎಲ್ಲರೂ ಅಲ್ಲಿಗೆ ಹೋಗಿ ಆಕೆಯನ್ನು ಮಾತನಾಡಿಸಿದ್ದೆವು ಎಂದರೆ ಸರಿಯಲ್ಲ. ಪ್ರಾಸಾ 1 ರವರು ನಮಗೆ 1 ನೆ ಆರೋಪಿಯು 2 ರಿಂದ 6 ನೇ ಆರೋಪಿತರ ಪ್ರೇರಣೆಯಿಂದ ನನ್ನನ್ನು ಮದುವೆ ಆಗುವ ಉದ್ದೇಶದಿಂದ ಜೀಪಿನ್ನು ಉದಗೀರ ಕರೆದುಕೊಮಡು ಹೋಗಿ ಅಲ್ಲಿಂದ ರೈಲ್ವೆ ಹತ್ತಿ ಶಿರಡಿಗೆ ನಾನು ಮತ್ತು 1 ನೆ ಆರೋಪಿ ಹೋದೆವು ಮತ್ತು ಅಲ್ಲಿ ಒಂದುಲಾಡ್ಜನಲ್ಲಿ ರೂಂ ಮಾಡಿ ಉಳಿದಾಗ ಕೆಲವೆ ಗಂಟೆಗಳಲ್ಲಿ ಪೋಲಿಸರು ಅಲ್ಲಿಗೆ ಬಂದು ನಮ್ಮನ್ನು ಕರೆದುಕೊಂಡು ಬಂದಿದ್ದಾರೆ ಎಂದು ವಿವರವಾಗಿ ನನ್ನ ಮುಂದೆ ಹೇಳಿರುತ್ತಾಳೆ ಎಂದರೆ ಸರಿಯಲ್ಲ.

ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು.

ಘಟನೆ ಬಗ್ಗೆ ಗೊತ್ತಿದ್ದರೂ ಸಹ, 1 ನೇ ಆರೋಪಿಯು ಪ್ರಾಸಾ 1 ರವರನ್ನು ಅಪಹರಿಸಿಕೊಂಡು ಹೋಗಿದ್ದರೂ ಸಹ, ಪ್ರಾಸಾ 1 ರವರು ನನ್ನ ಸಂಬಂಧಿಕನಾಗಿದ್ದ ಕಾರಣ , ಆಕೆಯ ಮದುವೆ ಮತ್ತು ಭವಿಷ್ಯದ ಹಿತದೃಷ್ಟಿಯಿಂದ ಮತ್ತು ಆರೋಪಿತರು ನಮ್ಮ ಊರಿನವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀ. ಡಿ.ಬಿ. ವಕೀಲರು ಆರೋಪಿ ಪರವಾಗಿ:

ಏನೂ ಇಲ್ಲ.

ಮರು ವಿಚಾರಣೆ: ಇಲ್ಲ

ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೆ.ಕೆ. ಸರಿ. ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೀದರ.